**ಶ್ರೀ ಜಗದ್ಗುರು ಹೌಸಿಂಗ್ ಕೋ ಆಪರೇಟಿವ್ ಸೊಸೈಟಿ ಲಿಮಿಟೆಡ್**
ನಂ.11, ಮೊದಲ ಮಹಡಿ, ಲಿಂಕ್ ರಸ್ತೆ, ಬ್ರಿಗೇಡ್ ಸ್ಪಾರ್ಕಲ್ ಎದುರು, ಜೆ ಪಿ ನಗರ, ಮೈಸೂರು-570008
Website-www.jhcs.org.in/ e-mail-jhcs.mys@gmail.com
ಆದೇಶ ಸಂಖ್ಯೆ, ಜೆ ಆರ್ ಎಂ / ಆಡಳಿತ / ಬಿ/ ಹೆಚ್ ಹೆಚ್ ಎಸ್/ ಸಿ ಆರ್-08
`ನೋಂದಣಿ ಸಂಖ್ಯೆ 49223/ 2022-23 ದಿನಾಂಕ:26-07-2023
ದೂರವಾಣಿಸಂಖ್ಯೆ: 0821-3565157 / +91-9686707679
**ಕಛೇರಿಯ ಸಮಯ:** ಬೆಳಿಗ್ಗೆ **10:00** ರಿಂದ **ಸಂಜೆ 5:30ರ ವರೆಗೆ**

---

NO, JHCS- 50/2024-2025 **ಸುತ್ತೋಲೆ-11** **ದಿನಾಂಕ:19.03.2025.**

ಆತ್ಮೀಯ ಬಂಧುಗಳೆ,

ನಮ್ಮೆಲ್ಲರನ್ನೂ ಸದಾ ಸ್ಥೈರ್ಯ ಹಾಗೂ ಆತ್ಮವಿಶ್ವಾಸದಿಂದ ಮುನ್ನಡೆಸುವ ಶಕ್ತಿಕೇಂದ್ರವಾಗಿರುವ ಸುತ್ತೂರು ಶ್ರೀಮಠದ ಗುರುಪರಂಪರೆಗೆ, ಶಿರಸಾಷ್ಟಾಂಗ ನಮಸ್ಕಾರವನ್ನು ಅರ್ಪಿಸುತ್ತೇವೆ.

ಇಂದು ಈ ಸುತ್ತೋಲೆಯಲ್ಲಿ, 2023–2024 ರ ಸರ್ವಸದಸ್ಯರ ಸಾಮಾನ್ಯ ಸಭೆಯ ನಂತರದ ವಿದ್ಯಮಾನಗಳನ್ನು ತಮ್ಮ ಅವಗಾಹನೆಯ ಕೃಪೆಗಾಗಿ ಮಂಡಿಸುತ್ತಿದ್ದೇವೆ.

1.ಹಿಂದಿನ ಸರ್ವಸದಸ್ಯರ ಸಾಮಾನ್ಯ ಸಭೆಯಲ್ಲಿ ಚರ್ಚಿತವಾದಂತೆ, ಮೆಲ್ಲಹಳ್ಳಿ–ಹಾರೋಹಳ್ಳಿ ಭೂಮಿಯಲ್ಲಿನ ಕಾನೂನು ತೊಡಕುಗಳ ಸಲುವಾಗಿ ಆ ಪ್ರಸ್ತಾವನೆಯನ್ನು ಸದ್ಯಕ್ಕೆ ಪರಿಗಣಿಸದಿರಲು ತೀರ್ಮಾನಿಸಲಾಯಿತು. ತದನಂತರ ಭೂಮಾಲೀಕರಾದ ಶ್ರೀ ಚೇತನ್.ಪಿ.ತಯಾಳ್ ಹಾಗೂ ಶ್ರೀ ಶ್ರೀಕಾಂತ್ ಅವರು ಸುಗ್ಗನಹಳ್ಳಿ ಎಲ್ಲೆಯಲ್ಲಿ ಶ್ರೀ ಶ್ರೀಕಾಂತ್ ಮಾಲೀಕತ್ವಕ್ಕೆ ಸೇರಿದ 50 ಎಕರೆ ಕಾನೂನು ಅಡಚಣೆ ಮುಕ್ತ ಭೂಮಿಯನ್ನು ನಿವೇಶನ ಅಭಿವೃದ್ಧಿದಾರರಾದ ಶ್ರೀ ಎಂ.ಎಸ್.ಕುಮಾರಸ್ವಾಮಿ ಅವರ ಮೂಲಕ ಅಭಿವೃದ್ಧಿಪಡಿಸುವುದಾಗಿ ಆಶ್ವಾಸನೆ ನೀಡಿದ್ದರು. ಅಲ್ಲದೆ ಈ ಹಿಂದೆ ನಮ್ಮ ಸಂಘ ಭೂಮಾಲೀಕರೊಡನೆ ಮಾಡಿಕೊಂಡಿದ್ದ "ತಿಳುವಳಿಕೆ ಜ್ಞಾಪಕ ಪತ್ರ" (MOA) ರದ್ದುಪಡಿಸಿ ಹೊಸ ಒಪ್ಪಂದ ಮಾಡಿಕೊಳ್ಳಲು ನಿವೇದಿಸಿದ್ದರು. ಆದರೆ ಈ ನಿಟ್ಟಿನಲ್ಲಿ ಮುಂದುವರಿಯಲು ನಾವು ಅಭಿವೃದ್ಧಿದಾರರೂ ಸೇರಿದಂತೆ ನಿರಂತರವಾಗಿ ಅವರನ್ನು ಸಂಪರ್ಕಿಸಿ ತತ್ಸಂಬಂಧಿತ ಭೂದಾಖಲೆಗಳನ್ನು ಪಡೆಯಲು ಸತತವಾಗಿ ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ವೃಥಾ ಕಾಲಹರಣವಾಗುತ್ತಿದೆ ಎಂಬ ಬೇಸರ ನಮ್ಮನ್ನು ಕಾಡಲಾರಂಭಿಸಿತು. ಈ ನಡುವೆ ಒಂದು ತಿಂಗಳ ಹಿಂದೆ ಭೂಮಾಲೀಕರು, ಯಾವುದೇ ಭೂ ದಾಖಲೆಗಳನ್ನು ಒದಗಿಸದೆ 10 ಕೋಟಿ ರೂ. ಮುಂಗಡ ನೀಡಿದರೆ ಹೊಸ "ತಿಳುವಳಿಕೆ ಜ್ಞಾಪಕಪತ್ರ" (NEW MOA) ಕ್ಕೆ ಸಹಿ ಹಾಕುವುದಾಗಿ ಹೊಸ ಬೇಡಿಕೆ ಸಲ್ಲಿಸಿದರು.

ಆದರೆ ಭೂ ದಾಖಲೆಗಳನ್ನು ಪರಿಪೂರ್ಣವಾಗಿ ಪರಾಮರ್ಶಿಸದೇ ಈ ಸಾಹಸಕ್ಕೆ ಕೈಹಾಕಿ, ಮುಂದೆ ಅಕಸ್ಮಾತ್ ಕಾನೂನು ತೊಡಕು ಸಂಭವಿಸಿದರೆ, ನಿವೇಶನಗಳ ಪ್ರಭುಗಳಾದ ತಮ್ಮನ್ನು ಸಂಕಷ್ಟಕ್ಕೆ ಈಡುಮಾಡಬಾರದೆಂದು ನಾವು ಈ ನಿಟ್ಟಿನಲ್ಲಿ ಮುಂದುವರಿಯಲಿಲ್ಲ. ಅಲ್ಲದೆ ನಾವು ನೀಡಬೇಕಾಗಿದ್ದ ಮುಂಗಡ ಹಣ ಕೂಡ ಬೃಹತ್ ಪ್ರಮಾಣದ್ದಾಗಿತ್ತು. ನಾವು ಎಂದೆಂದೂ ಭೂಮಾಲೀಕರ ಕೇವಲ ಆಶ್ವಾಸನೆ ಆಧರಿಸಿ ತಪ್ಪು ಮಾಹಿತಿಗಳನ್ನು ನಮ್ಮ ಸದಸ್ಯಪ್ರಭುಗಳೊಡನೆ ಹಂಚಿಕೊಳ್ಳುವ ಜಾಯಮಾನದವರಲ್ಲ ಎಂಬುದು ತಮಗೆ ಈಗಾಗಲೇ ಮನವರಿಕೆಯಾಗಿದೆ. ಸಂಘದ ನಿರ್ವಹಣೆಯಲ್ಲಿ ಪಾರದರ್ಶಕತೆ ಇರಬೇಕು ಎಂಬ ತತ್ವಕ್ಕೆ ನಾವು ಸದಾ ಬದ್ಧರಾಗಿರುವುದರಿಂದಲೇ ಈ ಎಲ್ಲ ಸಂಗತಿಗಳನ್ನು ತಮ್ಮ ಅವಗಾಹನೆಗೆ ತರುತ್ತಿದ್ದೇವೆ. ಸದರಿ ಪ್ರದೇಶದಲ್ಲಿ ನಮ್ಮ ಕನಸನ್ನು ನನಸಾಗಿಸಿಕೊಳ್ಳಲಾಗದ್ದಕ್ಕೆ ನಿಜಕ್ಕೂ ನಮ್ಮಲ್ಲಿ ತೀವ್ರ ಬೇಸರವಾಗಿದೆ ಮತ್ತು ಅದಕ್ಕಾಗಿ ತಮ್ಮೆಲ್ಲರ ಕ್ಷಮೆಯಾಚಿಸುತ್ತೇವೆ.

2. ಸದರಿ ಭೂಮಾಲೀಕರಾದ ಶ್ರೀ ಶ್ರೀಕಾಂತ್ ರವರಿಂದ ಸಂಘಕ್ಕೆ ವಾಪಸ್ ಬರಬೇಕಿರುವ ಎರಡೂವರೆ ಕೋಟಿ ಹಣವನ್ನು ನಾವು ಶೀಘ್ರದಲ್ಲೇ ಪಡೆಯುತ್ತೇವೆ. ತಡವಾದರೆ ಕಾನೂನಿನ ಹಾದಿ ಹಿಡಿಯುತ್ತೇವೆ ಹಾಗೂ ಶ್ರೀ ಚೇತನ್ ಪಿ ತಯಾಳ್ ರವರು ರೂ. 4,96,77,500/– ಕ್ಕೆ ಚೆಕ್ ನೀಡಿರುತ್ತಾರೆ.

3. ಈಗಾಗಲೇ ಸಂಘಕ್ಕೆ ನೊಂದಣಿಯಾಗಿರುವ ಜಮೀನಿನ ಬಗ್ಗೆ 2023–24ನೇ ಸಾಲಿನ ಸಾಮಾನ್ಯ ಸಭೆಯಲ್ಲಿ ತೀರ್ಮಾನಿಸಿದಂತೆ ಮುಂದಿನ ಸರ್ವಸದಸ್ಯರ ಸಭೆಯಲ್ಲಿ ಚರ್ಚಿಸಲಾಗುತ್ತದೆ.

ಈ ಮೇಲ್ಕಾಣಿಸಿದ ಕಾರಣಗಳಿಂದಾಗಿ ನಾವು ತಮಗೆ ನೀಡಿದ್ದ ಭರವಸೆಗಳನ್ನು ಈಡೇರಿಸಲು ಸಾಧ್ಯವಾಗಲಿಲ್ಲ. ಅದಕ್ಕಾಗಿ ನಾವು ತೀವ್ರವಾಗಿ ವಿಷಾದಿಸುತ್ತೇವೆ ಮತ್ತು ಸದಸ್ಯಪ್ರಭುಗಳ ಕ್ಷಮೆ ಯಾಚಿಸುತ್ತೇವೆ. ದಯಮಾಡಿ ಮನ್ನಿಸಿ.ಕಾರ್ಯಗತವಾಗುತ್ತಿರುವ ಪರ್ಯಾಯ ಯೋಜನೆಗಳಿಗೆ ಆಶೀರ್ವದಿಸಬೇಕೆಂದು ಕೋರುತ್ತೇವೆ.

2023–24ನೇ ಸಾಲಿನ ಸಾಮಾನ್ಯ ಸಭೆಯಲ್ಲಿ ಪರ್ಯಾಯ ಯೋಜನೆಯ ಬಗ್ಗೆ ತಮಗೆ ತಿಳಿಸಿದಂತೆ ತಳೂರು–ಮುರುಡಗಳ್ಳಿ–ದೊಡ್ಡ ಕಾಟೂರು ಎಲ್ಲೆಯಲ್ಲಿ 51 ಎಕರೆ ಜಮೀನನ್ನು ಗುರುತಿಸಿ ಪ್ಲಾನ್ ಬಿ ಅಕ್ಷನ್ ಪ್ರಕಾರ ಭೂ ಅಭಿವೃದ್ಧಿ ಕೆಲಸ ಪ್ರಾರಂಭವಾಗಿದ್ದು (ಈಗಾಗಲೇ 5 ಎಕರೆ 36 ಗುಂಟೆ ಅನ್ಯಕ್ರಾಂತವಾಗಿದ್ದು, ನಕ್ಷೆ ಅನುಮೋದನೆ ಪಡೆದಿರುತ್ತದೆ) 16 ಎಕರೆ 12 ಗುಂಟೆ ಭೂ ಪರಿವರ್ತನೆ ಆಗಿದ್ದು, ನಕ್ಷೆ ಅನುಮೋದನೆಗೆ ಡಿಟಿಸಿಪಿ ಇಲಾಖೆಗೆ ಸಲ್ಲಿಸಲಾಗಿದೆ. ಏಪ್ರಿಲ್ ಕೊನೆಯ ವಾರದಲ್ಲಿ ನಕ್ಷೆಯ ಅನುಮೋದನೆ ದೊರೆಯಲಿದ್ದು ಮೇ ಮಾಹೆಯಲ್ಲಿ ಅಭಿವೃದ್ಧಿ ಕಾರ್ಯ ಪ್ರಾರಂಭಿಸಲಾಗುತ್ತದೆ. ಇನ್ನು ಉಳಿದಿರುವ 11 ಎಕರೆ ಜಮೀನಿಗೆ ಅನ್ಯಕ್ರಾಂತ ಪ್ರಕ್ರಿಯೆ ಪ್ರಗತಿಯಲ್ಲಿದೆ. ಇನ್ನು ಉಳಿದ 18 ಎಕರೆ ಜಮೀನನ್ನು ಕರಾರು ಮಾಡಿಕೊಳ್ಳಲಾಗಿದೆ ಹಾಗೂ ಜೂನ್–2026 ರೊಳಗೆ ನಿವೇಶನ ಹಂಚಿಕೆ ಮಾಡಲು ಕ್ರಮ ವಹಿಸಿದ್ದೇವೆ.

## <u>ದೊಡ್ಡಕಾಟೂರು – ಮುರಡಗಳ್ಳಿ – ತಳೂರು ಯೋಜನೆಯ ಮುಖ್ಯ ಅಂಶಗಳು.</u>

- ಶ್ರೀ ಜಗದ್ಗುರು ಹೌಸಿಂಗ್ ಕೋ–ಆಪರೇಟಿವ್ ಸೋಸೈಟಿ ನಿಗಧಿ ಪಡಿಸಿರುವ ಮೌಲ್ಯ ಚದರಡಿಗೆ ರೂ. 799/– ಆಗಿದೆ.
- ತಳೂರಿನ ಆಸು–ಪಾಸಿ ನಲ್ಲಿ ಈಗಾಗಲೇ ಖಾಸಗೀ ನಿವೇಶನ ಅಭಿವೃದ್ಧಿ ಪಡಿಸಿರುವವರು ನಿಗದಿ ಪಡಸಿರುವ ಮೌಲ್ಯ ಚದರಡಿಗೆ ರೂ. 1300/– ಕ್ಕಿಂತ ಅಧಿಕ ಆಗಿರುತ್ತದೆ.
- ನಮ್ಮ ಈ ಹೊಸ ಯೋಜನೆಗೆ ಹೊಂದಿಕೊಂಡಂತೆ ಸರ್ಕಾರಿ ನೌಕರರ ಸಂಘದಿಂದ 38 ಎಕರೆ ಜಮೀನಿನಲ್ಲಿ ನಿವೇಶನ ಅಭಿವೃದ್ಧಿ ಕೆಲಸ ಪ್ರಗತಿಯಲ್ಲಿದ್ದು ನಿವೇಶನ ಹಂಚಿಕೆ ಪ್ರಗತಿಯಲ್ಲಿದೆ. ಹಾಗೂ 60 ಎಕರೆ ಜಮೀನಿನಲ್ಲಿ ಪೋಲಿಸ್ ಲೇ ಔಟ್ ಅಭಿವೃದ್ಧಿ ಕೆಲಸವೂ ಸಹ ಪೂರ್ಣಗೊಂಡಿದ್ದು ಹಂಚಿಕೆ ಕಾರ್ಯ ಪ್ರಗತಿಯಲ್ಲಿದೆ.
- ಸಿ.ಎಂ ಆದೇಶದ ಪ್ರಕಾರ ಕಡಕೊಳದ ಹತ್ತಿರ ಫಿಲಂ ಸಿಟಿ ತಲೆ ಎತ್ತಲಿದ್ದು ಇದರಿಂದ ನಮ್ಮ ಬಡಾವಣೆ ವೇಗವಾಗಿ ಅಭಿವೃದ್ಧಿ ಹೊಂದಲು ಸಹಕಾರಿಯಾಗಲಿದೆ.
- ಕೆ ಆರ್ ಸರ್ಕಲ್ ಮೈಸೂರಿನಿಂದ 15 ಕಿ. ಮೀ ದೂರದಲ್ಲಿರುತ್ತದೆ.
- ಈ ಹೊಸ ಯೋಜನೆಯು ಶ್ರೀನಗರ – ದಡದಹಳ್ಳಿ – ತಳೂರು ಹಾಗೂ ಮುರುಡಗಳ್ಳಿ – ದೊಡ್ಡಕಾಟೂರು 60 ಅಡಿ ರಸ್ತೆಗಳಿಗೆ ಹೊಂದಿಕೊಂಡಿರುತ್ತದೆ. ಹಾಗೂ ಕಡಕೊಳದಿಂದ–ತಳೂರು ಮುಖಾಂತರ ಜಯಪುರ 80 ಅಡಿ ರಾಜ್ಯ ಹೆದ್ದಾರಿ ರಸ್ತೆಗೆ ಹೊಂದಿಕೊಂಡಿರುತ್ತದೆ.
- ಡೈರೆಕ್ಟರ್ ಆಫ್ ಟೌನ್ ಮತ್ತು ಕಂಟ್ರಿಪ್ಲಾನಿಂಗ್ ವ್ಯಾಪ್ತಿಯಲ್ಲಿ ಬರುತ್ತದೆ. (DTCP)

- ಮೈಸೂರಿನ ವರ್ತುಲರಸ್ತೆಯಿಂದ (Ring Road) 8 ಕಿ.ಮೀ ದೂರದಲ್ಲಿರುತ್ತದೆ ಹಾಗೂ 10 ನಿಮಿಷದ ಪ್ರಯಾಣ.

- ಪ್ರಸ್ತಾಪದಲ್ಲಿರುವ ಪೆರಿಫೆರಲ್ ವರ್ತುಲ ರಸ್ತೆಯ ಒಳಗಡೆಯೇ ಈ ಬಡಾವಣೆ ಅಭಿವೃದ್ಧಿಯಾಗಲಿದೆ.

- ಮೈಸೂರು ವಿಮಾನ ನಿಲ್ದಾಣದಿಂದ ಕೇವಲ 07 ಕಿ.ಮೀ ಹಾಗೂ 10 ನಿಮಿಷದ ಪ್ರಯಾಣ.

- ಮೈಸೂರಿನಿಂದ–ನಂಜನಗೂಡಿನ ಮಧ್ಯದಲ್ಲಿ ನಿರ್ಮಿತವಾಗುತ್ತಿರುವ ಮುಂಬರುವ ಪಟ್ಟಣ (Up Coming Township)

- ಕಡಕೊಳ ಬಸ್ ಸ್ಟ್ಯಾಂಡಿನಿಂದ TVS ಕಂಪನಿ ಮುಖಾಂತರ 7 ಕಿ.ಮೀ ದೂರದಲ್ಲಿರುತ್ತದೆ ಹಾಗೂ 10 ನಿಮಿಷದ ಪ್ರಯಾಣ.

- TVS ಕಂಪನಿ ಯಿಂದ 5 ಕಿ.ಮೀ ದೂರದಲ್ಲಿರುತ್ತದೆ ಹಾಗೂ 08 ನಿಮಿಷ ಪ್ರಯಾಣ.

- ಈಗಾಗಲೇ ತಿಳಿಸಿರುವಂತೆ 05 ಎಕರೆ 36 ಗುಂಟೆ ಪ್ಲಾನ್ ಅಪ್ರೂವಲ್ ಆಗಿ ನಿವೇಶನ ಅಭಿವೃದ್ಧಿ ಕೆಲಸ ಪ್ರಗತಿಯಲ್ಲಿದೆ.

- 16 ಎಕರೆ 12 ಗುಂಟೆ ಜಮೀನು ಅನ್ಯಕ್ರಾಂತವಾಗಿದ್ದು, ನಕ್ಷೆ ಅನುಮೋದನೆಗೆ ಕಾಯಲಾಗುತ್ತಿದೆ.

- 11 ಎಕರೆ ಜಮೀನು ಭೂ ಪರಿವರ್ತನೆ ಹಂತದಲ್ಲಿದೆ.

- ನಮಗೆ ಬೇಕಾದ ಇನ್ನು 18 ಎಕರೆ ಭೂಮಿ ಅಭಿವೃದ್ಧಿದಾರರ ಹೆಸರಿಗೆ Agreement ಆಗಿದ್ದು, Land Registration ಆಗಬೇಕಿದೆ.

- ಈಗಾಗಲೇ ಪ್ಲಾನ್ ನಲ್ಲಿ ಗುರುತಿಸಿರುವಂತೆ ದೇವಸ್ಥಾನ, ಯೋಗ ಮತ್ತು ಧ್ಯಾನ ಮಂದಿರ ನಿರ್ಮಾಣದ ಗುರಿ ಹೊಂದಲಾಗಿದೆ.

ಈ ಮೇಲಿನ ಎಲ್ಲಾ ಕಾರಣಗಳಿಂದ ಬನ್ನೂರು ರಸ್ತೆಯ ಯೋಜನೆಯನ್ನು ಮುಂದುವರಿಸಲು ಸಾದ್ಯವಾಗದಿರುವ ಕಾರಣ ಪರ್ಯಾಯ ಯೋಜನೆಯಾದ ದೊಡ್ಡ ಕಾಟೂರು–ಮುರಡಗಳ್ಳಿ–ತಳೂರಿನಲ್ಲಿ ಅಭಿವೃದ್ಧಿ ಪಡಿಸುತ್ತಿರುವ ಯೋಜನೆಗೆ ತಮ್ಮಗಳೆಲ್ಲರ ಸಹಕಾರವನ್ನು ಕೋರುತ್ತಾ ಈ ಸಂಘದ ಶ್ರೇಯೋಭಿವೃದ್ದಿಗೆ ಆಶೀರ್ವದಿಸಬೇಕೆಂದು ಮತ್ತೊಮ್ಮೆ ಪ್ರಾರ್ಥಿಸಿಕೊಳ್ಳುತ್ತಾ ಈ ಯೋಜನೆಯನ್ನು ಖಂಡಿತವಾಗಿ ಒಂದು "ಅನನ್ಯ" (Unique) Layout ಆಗಿ ಅಭಿವೃದ್ಧಿಪಡಿಸಿ ತಮ್ಮಗಳಿಗೆ ನಿವೇಶನ ನೀಡಲು ಬದ್ದರಾಗಿರುತ್ತೇವೆ. ತಮಗೆ ಈಗಾಗಲೇ ತಿಳಿದಿರುವಂತೆ, ಯಾವುದೇ ಕಾರಣಕ್ಕೂ ನಿಮ್ಮ ಈ ಆಡಳಿತ ಮಂಡಳಿ Layout ನಲ್ಲಿ ಅಭಿವೃದ್ದಿಯಾಗಲಿರುವ ಮೂಲೆ ನಿವೇಶನಗಳನ್ನು ಹರಾಜು ಪ್ರಕ್ರಿಯೆ ಮುಖಾಂತರ ಮಾರಾಟ ಮಾಡದೆ, ಒಂದು ನಿಗದಿತ ಬೆಲೆಯನ್ನು ನಿಗದಿ ಪಡಿಸಿ ಸಂಘಕ್ಕೆ ಈಗಾಗಲೇ ಹಣ ಕಟ್ಟಿ ಕಾಯುತ್ತಿರುವ ನಮ್ಮ ಮಾನ್ಯ ಸದಸ್ಯ ಬಂಧುಗಳಿಗೆ ಲಾಟರಿ ಮುಖಾಂತರ ಹಂಚಲಾಗುವುದು ಎಂದು ತಿಳಿಸಲು ಹರ್ಷಿಸುತ್ತೇವೆ. ನಮಗೆ ನಿಮ್ಮ ಬೆಂಬಲದ ಶ್ರೀರಕ್ಷೆ ಸದಾ ಇರುತ್ತದೆ ಎಂಬುದು ನಮ್ಮ ದೃಢ ವಿಶ್ವಾಸ ಮತ್ತು ತಮ್ಮ ವಿಶ್ವಾಸವನ್ನ ಸಾಕಾರಗೊಳಿಸುವುದು ನಮ್ಮ ಸಂಕಲ್ಪ.

ಗೌರವಪೂರ್ವಕ ವಂದನೆಗಳು.

ತಮ್ಮ ವಿಶ್ವಾಸಿ

ಸಹಿ/–

(ಅಧ್ಯಕ್ಷರು / ಕಾರ್ಯದರ್ಶಿಗಳು)